# ಜಾನಕಿ ಷಾ

## 'ದೇವರೊಡನೆ ಬಾಳಿದವರು'

ಸಂಗ್ರಹ: **ಸ್ವರ್ಣಗೌರಿ**


ಆಲ್ಮೋರಾದ ಗೌರವಾನ್ವಿತ ಪ್ರಜೆ 'ಲಾಲಾ ಬದ್ರಿ ಷಾ'. ಶ್ರೀಮತಿ ಜಾನಕಿ ಷಾ, ಲಾಲಾ ಬದ್ರಿ ಷಾ ರವರ ಬಂಧುಗಳಾದ ಶ್ರೀಮಾನ್ ಜವಹರಲಾಲ್ ಷಾರವರ ಪತ್ನಿ. ರಾಮಕೃಷ್ಣ ಮಠದ ಎಲ್ಲಾ ಸಾಧು ಸಂನ್ಯಾಸಿಗಳನ್ನು ಆದರಿಸಿ, ಸತ್ಕರಿಸಿ, ಸೇವೆ ಮಾಡಿದ ಲಾಲಾ ಬದ್ರಿ ಷಾರವರು ನಿಷ್ಠಾವಂತ ಭಕ್ತರಾಗಿದ್ದರು. ಸ್ವಾಮಿ ವಿವೇಕಾನಂದರಿಗೆ ಅವರೊಡನೆ ಅನ್ಯೋನ್ಯವಾದ ಸಂಬಂಧವಿತ್ತು. ಒಂದು ದಿನ ಅಪರಾಹ್ನದ ಹೊತ್ತಿನಲ್ಲಿ ಜಾನಕಿಯ ಮನೆಗೆ ಭಿಕ್ಷೆಯನ್ನು ಯಾಚಿಸುತ್ತಾ ಸಾಧುವೊಬ್ಬರು ಬಂದರು. ಅವರನ್ನು ಸ್ವಾಗತಿಸಿ, ಸುಖಾಸನವಿತ್ತು, ಬಿಸಿ ಬಿಸಿ ಹಾಲನ್ನಿತ್ತು ಸತ್ಕರಿಸಿದಳು ಜಾನಕಿ ಷಾ. ತಲೆಗೆ ರುಮಾಲನ್ನು ಕಟ್ಟಿಕೊಂಡಿದ್ದ ಆ ಸಾಧುವು ಶ್ರದ್ಧಾಭಕ್ತಿಗಳಿಂದ ನೀಡಿದ ಆ ಹಾಲನ್ನು ಸ್ವೀಕರಿಸಿ, ಆಕೆಗೆ ಗಹನವಾದ ಆಧ್ಯಾತ್ಮಿಕ ಉಪದೇಶಗಳನ್ನಿತ್ತು ವಿದಾಯ ಹೇಳಿದರು. ಸಾಧುವಿನ ನಿರ್ಗಮನದ ನಂತರ ಅವರಲ್ಲಿ ಸ್ವಾಮಿ ವಿವೇಕಾನಂದರ ಹೋಲಿಕೆಯನ್ನು ಕಂಡು, ಸಂಶಯದಿಂದ ಅವರನ್ನು ಅರಸುತ್ತಾ ಮನೆಯಿಂದ ಹೊರಬಂದು, ಓಡುತ್ತ ಬಸ್ ನಿಲ್ದಾಣದ ವರೆಗೂ ಹುಡುಕಾಡಿದರು. ಆದರೆ ಅಷ್ಟರಲ್ಲಿ ಆ ಸಾಧು ಕಣ್ಮರೆಯಾಗಿಬಿಟ್ಟಿದ್ದರು.

ಈ ಘಟನೆ ನಡೆದು ಅನೇಕ ದಿನಗಳ ನಂತರ ಸಾಧುವೊಬ್ಬರು ಆಕೆಗೆ ಕಾಗದದ ಲಕೋಟೆಯೊಂದನ್ನು ಕೊಟ್ಟು ಅದನ್ನು ತಕ್ಷಣವೇ ನೋಡಬಾರದೆಂದು ಆಜ್ಞಾಪಿಸಿ ನಿರ್ಗಮಿಸಿದರು. ಜಾನಕಿಯು ಅದನ್ನು ಜೋಪಾನವಾಗಿ ಪೆಟ್ಟಿಗೆಯಲ್ಲಿಟ್ಟು ನಂತರ ಆ ವಿಷಯವನ್ನು ೨೦ ವರ್ಷಗಳ ಕಾಲ ಮರತೇಬಿಟ್ಟಳು! ಮುಂದೊಮ್ಮೆ ಮನೆಯನ್ನು ಬದಲಾಯಿಸುತ್ತಿರುವ ಸಂದರ್ಭದಲ್ಲಿ ಲಕೋಟೆಯು ದೊರಕಿ, ಅದರಲ್ಲಿ ಶ್ರೀಕೃಷ್ಣನ ಭಾವದಲ್ಲಿದ್ದ ಸ್ವಾಮಿ ವಿವೇಕಾನಂದರ ಭಾವಚಿತ್ರವನ್ನು ನೋಡಿ ಅವಳಿಗೆ ಆಶ್ಚರ್ಯವಾಯಿತು. ಆಲ್ಮೋರಾದ ಸ್ವಾಮಿ ವಿವೇಕಾನಂದರ ಭಾವಚಿತ್ರ ಇದೊಂದೆ. ಆ ಭಾವಚಿತ್ರವು ತನ್ನೊಡನೆ ಮಾತನಾಡುತ್ತಿತ್ತೆಂದೂ ಹಾಗೂ ತಾನು ಎಲ್ಲಿಗೆ ಹೋದರೂ ಆ ಎರಡು ನಯನಗಳು ತನ್ನನ್ನು ಗಮನಿಸುತ್ತಿದ್ದವು ಎಂದೂ ಜಾನಕಿ ಹೇಳುತ್ತಿದ್ದಳು.

ಒಮ್ಮೆ ಅವಳಿಗೆ ಮಗನೊಡನೆ ಪರಸ್ಥಳಕ್ಕೆ ಹೋಗಬೇಕಾಗಿ ಬಂತು. ರಾತ್ರಿ ವೇಳೆ ಮಗನೊಡನೆ ಮಲಗಿದ್ದಾಗ ಸ್ವಾಮೀಜಿ ತನ್ನ ಬಳಿಯಲ್ಲಿ ನಿಂತು ಕಣ್ಣೀರು ಸುರಿಸುತ್ತಿದ್ದಂತೆ ಅವಳಿಗೆ ಭಾಸವಾಯಿತು. ಈ ದರ್ಶನವನ್ನು ಉದಾಸೀನ ಮಾಡದೆ, ಮಗನೊಡನೆ ತಕ್ಷಣವೇ ತನ್ನ ಊರಿಗೆ ಹೊರಟು, ಅವೇಳೆಯಲ್ಲಿ ಮನೆ ತಲುಪಿದಳು. ಅಲ್ಲಿ ಕಂಡದ್ದೇನು?

ಹೃದಯಾಘಾತದಿಂದ ನರಳುತ್ತಿದ್ದ ಪತಿಯು ತನ್ನ ಕೊನೆಯ ಕ್ಷಣಗಳನ್ನು ಎಣಿಸುತ್ತಿದ್ದನು. ಪತ್ನಿಯೊಡನೆ ಪಿಸುಗುಡುವ ಧ್ವನಿಯಲ್ಲಿ ಒಂದೆರಡು ಮಾತುಗಳನ್ನಾಡಿ, ಅವನು ಕಣ್ಮುಚ್ಚಿದನು.

## ಯುವಚೇತನ



### ಮಹಾವೀರನ ಆದರ್ಶ

ಮಹಾವೀರನನ್ನು ನಮ್ಮ ಗುರಿಯಾಗಿಟ್ಟುಕೊಳ್ಳಬೇಕು. ರಾಮಚಂದ್ರನ ಆಣತಿಯಂತೆ ಅವನು ಹೇಗೆ ಸಮುದ್ರವನ್ನೇ ದಾಟಿದ! ಅವನಿಗೆ ಜೀವನ ಮರಣ ಯಾವುದರ ಮೇಲೂ ಗಮನವಿರಲಿಲ್ಲ. ಅವನು ಇಂದ್ರಿಯಗಳನ್ನು ಸಂಪೂರ್ಣವಾಗಿ ತನ್ನ ವಶದಲ್ಲಿಟ್ಟುಕೊಂಡಿದ್ದ, ತೀಕ್ಷ್ಣಮತಿಯಾಗಿದ್ದ. ನೀವೀಗ ಈ ಸೇವೆಯ ಮಹೋದ್ದೇಶದ ಮೇಲೆ ನಿಮ್ಮ ಜೀವನವನ್ನು ಕಟ್ಟಬೇಕು. ಅದರ ಮೂಲಕ ಇತರ ಎಲ್ಲಾ ಉದ್ದೇಶಗಳೂ ಕ್ರಮೇಣ ವಿಕಸಿಸುವುವು. ಮರು ಮಾತಿಲ್ಲದೆ ಗುರುವಿನ ಮಾತಿಗೆ ವಿಧೇಯರಾಗಿ ನಡೆಯುವುದು, ಮತ್ತು ಬ್ರಹ್ಮಚಾರಿ ಜೀವನ ನಡೆಸುವುದು, ಇದೇ ಜಯದ ರಹಸ್ಯ. ಹನುಮಂತ ಒಂದು ಕಡೆ ಸೇವೆಯ ಮಹೋದ್ದೇಶವನ್ನು, ಇನ್ನೊಂದು ಕಡೆ ಇಡೀ ಜಗತ್ತೇ ಬೆರಗಾಗುವಂತಹ ಸಿಂಹಸದೃಶ ಧೈರ್ಯವನ್ನು ಪ್ರಕಟಿಸುತ್ತಾನೆ. ರಾಮನ ಕಲ್ಯಾಣಕ್ಕಾಗಿ ಪ್ರಾಣವನ್ನೇ ಅರ್ಪಿಸಲು ಅವನು ಸ್ವಲ್ಪವೂ ಅನುಮಾನಿಸಲಿಲ್ಲ. ರಾಮನ ಸೇವೆಯ ಹೊರತು ಉಳಿದುದರಲ್ಲೆಲ್ಲ ಅವನಿಗೆ ತಾತ್ಸಾರ. ಶ್ರೀರಾಮನ ಆಣತಿಯಂತೆ ನಡೆಯುವುದೊಂದೇ ಅವನ ಜೀವನದ ವ್ರತ. ಅಂತಹ ಹೃತ್ಪೂರ್ವಕ ಭಕ್ತಿ ಬೇಕಾಗಿದೆ.

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೮, ಪು.೨೨೮-೨೯)*